51st Year of Publication ★ SATYAVADI Daily, MYSORE 4

Reg No B G 155 ಶ್ರೀ 18-8-1966

ಪುಟ್ಟ ಗಾತ್ರ ಜಾಹೀರಾತುಗಳಿಗೆ
ಆಕರ್ಷಣೀಯ-ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ನ್ಯೆ ಪೈಸೆ
ಅಂಚೆಯವಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available
For Permanent Advertisement

ಸ್ಥಾಪಕರು : ತರನುತೆ ಸರ್ವೋದಯರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ನ್ಯೆ ಪೈಸೆ

ಸಮರ ನಿರೋಧ ಕರೆಗೆ ಪಾಕ್ ತಿರಸ್ಕಾರ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಕೆನ್ಕಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟೂಕೀಸಿನವರು, ಪದ್ಮಭೂಷಣ ಸ್ವಾಮಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯಪೂರ್ವಕ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದೆಂದು ಆಶಿಸಿ, ಕೃತಜ್ಞತಾಪೂರ್ವಕ ವಂದಿಸುತ್ತೇವೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಮತ್ತೆ ಹಣ ನೆರವು

ಪ್ರವಾಹ ಪರಿಹಾರಕ್ಕಾಗಿ ಈಗಾಗಲೇ ನೀಡಿರುವ ರೂ. 50000 ಹೊಡನೆ ಮತ್ತೆ ರೂ. 1 ಲಕ್ಷವನ್ನು ಪ್ರಧಾನರ ಪರಿಹಾರ ನಿಧಿಯಿಂದ ಕೊಡುವುದಾಗಿ ಶ್ರೀಮತಿ ಇಂದಿರಾ ಗಾಂಧಿ ತಿಳಿಸಿರುವರೆಂಬ ಸಾರತ್ ವಾರ್ತೆ. ಪುನರ್ವಸತಿ ಕಾರ್ಯಕ್ಕೆ ಈಗಾಗಲೇ ಸಾವಿರ ಜಿಂಕ್‌ಷೀಟ್ ಕೊಟ್ಟಿದೆ. ಮುಲೋ ಸರಬರಾಜು ಮಾಡಲಾಗುವುದೆಂದು ತಿಳಿಸಿದರು.

ಡ್ರೈವರ್‌ಗಳ ಮುಷ್ಕರ

ಹೈದರಾಬಾದಿನಲ್ಲಿ ಸ್ವಾತಂತ್ರ್ಯೋತ್ಸವ ಪೆರೇಡ್ ಆದನಂತರ ಹಂಗಾಮಿ ಮುಖ್ಯ ನ್ಯಾಯಾಧೀಶರ ಡ್ರೈವರಿನ ಮೇಲೆ ಪೊಲೀಸರು ದಬ್ಬಾಳಿಕೆ ಮಾಡಿದ ಆಪಾದನೆಗಾಗಿ ಮಂತ್ರಿಗಳ ಮತ್ತು ಅತಿ ಪ್ರಮುಖ ಗಣ್ಯರುಗಳ ಡ್ರೈವರುಗಳು ಕಾರು ನಡೆಸಲು ತಿರಸ್ಕರಿಸಿದರು. ಸಾರಿಗೆ ಮಂತ್ರಿ ಶ್ರೀ ನರಸಿಂಗರಾಯರು ಪೋಲೀಸು ಡೆಪ್ಯೂಟಿ ಕಮೀಷನರಿಗೆ ತಪ್ಪಿತಸ್ಥ ಪೋಲೀಸರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದಾಗ ಡ್ರೈವರುಗಳಿಗೆ ಸಮಾಧಾನವಾಗಿ ಕಾರುಗಳನ್ನು ನಡೆಸಿದರು.

★

ಕೆನಿಯ ವಿರೋಧ

ಮೆಕ್ಸಿಕೋದಲ್ಲಿನ ಒಲಂಪಿಕ್ ಕ್ರೀಡೆಗಳಲ್ಲಿ ರೊಡೀಷಿಯಾ ಭಾಗವಹಿಸುವುದನ್ನು ಕೆನಿಯಾ ನಿರೋಧಿಸಿದೆ ಎಂದು ನೈರೋಬಿ ವಾರ್ತೆ.

★

ಒಲಂಪಿಕ್ ಕ್ರೀಡೆಗಳು

ಮೆಕ್ಸಿಕೋದಲ್ಲಿ ನಡೆಯುವ ಒಲಂಪಿಕ್ ಕ್ರೀಡೆಗಳಲ್ಲಿ ದಾಖಲಾತಿಯಾದ 112 ರಾಷ್ಟ್ರಗಳು ಭಾಗವಹಿಸಲಿವೆ.

★

ಕ್ರೀಡಾಗಾರನ ಕೊಲೆ

ರಯೋಡಿ ಜನಿರೋದಿಂದ ಬಂದಿರುವ ವರರ್ತೆ. ನನ್ನ ಅಧಿಕಾರದಲ್ಲಿ ಯಾರೂ ಸವಾಲು ಮಾಡುವಂತಿಲ್ಲ. ನನ್ನ ನಿರ್ಧಾರವೇ ನ್ಯಾಯವೆಂದು ಹೇಳುತ್ತಾ, ಫುಟ್‌ಬಾಲ್ ಸಂಥೆಡಲ್ಲಿ ರೆಫ್ರಿ ಆಗಿದ್ದ ಯಾರೋ ಒಬ್ಬನು, ತನ್ನ ತೀರ್ಪನ್ನು ವಿರೋಧಿಸಿದ ಆಟಗಾರನೋರ್ವನನ್ನು ತುಪಾಕಿಯಿಂದ ಹೊಡೆದು ಕೊಂದನು. ಅತ ನಾಪತ್ತೆ ಆಗಿದ್ದಾನೆ.

ಹುಡುಗಿಯರ ಸೂಡಾಟ

ಬೊಂಬಾಯಿನಿಂದ ಬಂದಿರುವ ವಾರ್ತೆ. ಒಬ್ಬ ಅರಬ್ ರಾಷ್ಟ್ರೀಯರಿಗೆ ಒಂದು ಹುಡುಗಿಯನ್ನು ಮಾಡಿದ ಆಪಾದನೆ ಮೇಲೆ ಈರ್ವರು ಮಹಿಳೆಯರೂ ಸೇರಿ ಒಂಬತ್ತು ಮಂದಿ ಬಂಧಿಸಲ್ಪಟ್ಟರು. ಧನವಂತ ಅರಬ್ಬಿಯವರಿಗಾಗಿ ಹುಡುಗಿಯರನ್ನು ಒದಗಿಸುವ ಒಂದು ಅಂತರರಾಷ್ಟ್ರೀಯ ತಂಡಕ್ಕೆ ಈ ಅಪರಾಧಿಗಳು ಸೇರಿರುವಂತೆ ಶಂಕಿಸಲಾಗಿದೆ. ಹುಡುಗಿಯರು ಅರಬ್ಬಿ ದೇವಿಗೆ ತಲುಪಿದಾಗ ಇವರು ವಿಚ್ಛೇದಿತರಾದವರೆಂದು ಹೇಳಿ ಹೆಚ್ಚು ಹಣ ಕೊಡುವವರಿಗೆ ಅಥವಾ ಹುಡುಗಿಯರನ್ನು ಬಯಸುವವರಿಗೆ ಕೊಡಲಾಗುವುದು.

ಈ ಹುಡುಗಿಯನ್ನು ಒಬ್ಬ ಅರಬ್ ರಾಷ್ಟ್ರೀಯನಿಗೆ ಮಾರಲಾಗಿತ್ತೆಂದು ಪೊಲೀಸರು ತಿಳಿಸಿರುವರು. ಈ ತಂಡವು ಹುಡುಗಿಯನ್ನು ಪುಸಲಾಯಿಸಿ ತಂದು ಒಬ್ಬ ಮುಸ್ಲಿಂನ ಮನೆಯಲ್ಲಿಟ್ಟಿದ್ದ. ಹುಡುಗಿಯನ್ನು ರೂ. 2500 ಕ್ಕೆ ಮಾರಲಾಗಿತ್ತು ನಂತರ ಒಬ್ಬ ಖಾಜಿ ಎದುರಿಗೆ ಒಬ್ಬ ಅರಬ್ಬನಿಗೆ ವಿವಾಹ ಮಾಡಲಾಯಿತು.

ಹುಡುಗಿ ತಂದೆಯ ದೂರಿನ ಮೇಲೆ ಪೊಲೀಸರು ದಾಳಿ ಪಡಿಸಿ ಈ ಅರಬ್ಬನನ್ನು ಮತ್ತು 6 ಮಂದಿಯನ್ನು ಬಂಧಿಸಿದರು. ಈ ವ್ಯಾಪಾರಕ್ಕೆ ಸಂಬಂಧಿಸಿದ ಇಬ್ಬರು ವಿವಾಹಿತ ಮಹಿಳೆಯರನ್ನು ಬಂಧಿಸಿದರು.

ಅರಬ್ ದೇಶಗಳಲ್ಲಿ ಭಾರತದ ಹುಡುಗಿಯರಿಗೆ ರೂ. 15 ಸಾವಿರದಿಂದ ರೂ. 20 ಸಾವಿರದ ವರಿಗೆ ದೊರೆಯುವದೆಂದು ಈ ಅರಬ್ಬರು ತಿಳಿಸಿದರು.

○ ಯುವಕ ಕಾಂಗ್ರೆಸಿನ ಮೆರವಣಿಗೆಯ ಮೇಲೆ ಪೊಲೀಸರು ಈ ತಿಂಗಳ 1 ನೇ ದಿನಾಂಕ ಲಾಠಿ ಪ್ರಹಾರ ಮಾಡಿದ ಬಗ್ಗೆ ಸರಕಾರ ಮೌನವಾಗಿರುವುದನ್ನು ಪ್ರತಿಭಟಿಸಿ ಮದ್ರಾಸ್ ವಿಧಾನ ಸಭೆಯಲ್ಲಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಹೂಡಿದರು.

ಜಿಲ್ಲಾ ದಾನ

ಇಂದೂರಿನಿಂದ ಬಂದಿರುವ ವಾರ್ತೆಯ ಪ್ರಕಾರ ರಾಜ್ಯದ ಟಟವಾಗರ್ ಜಿಲ್ಲೆಯನ್ನು ಜಿಲ್ಲಾ ದಾನವಾಗಿ ಆಚಾರ್ಯ ವಿನೋಬಾರಿಗೆ ಅರ್ಪಿಸಲಾಗುವುದು. ಜಿಲ್ಲೆ 1800 ಚದುರ ಮೈಲಿ ಇದೆ. ಜನಸಂಖ್ಯೆ 4 ಲಕ್ಷ ಹತ್ತು ಸಾವಿರ.

★

ಪೌರಸಭೆ ಚುನಾವಣೆ

ಶೃಂಗೇರಿ ಪೌರಸಭೆ ಚುನಾವಣೆ ಡಿಸೆಂಬರ್ ಮೊದಲನೆ ವಾರ ನಡೆಯುವುದು.

★

ಶ್ರೀ ಶ್ರೀಯವರಿಗೆ ಗೌರವ

ಶೃಂಗೇರಿ ಜಗದ್ಗುರುಗಳವರು ತಮ್ಮ ಕಾಲೇಜಿಗೆ ಭೇಟಿಕೊಟ್ಟ ಸವಿನೆನಪಿಗಾಗಿ ಮಣಿಪಾಲಿನ ಭಾರತೀಯ ಸಂಸ್ಥೆಯು ಹಿಂದೂತತ್ವಜ್ಞಾನದ ಶಿಕ್ಷಣವನ್ನೇರ್ಪಡಿಸಲು ನಿರ್ಧರಿಸಿದೆ.

★

ದೊಡ್ಡ ಮೇಟಿಯವರ ಉಪದೇಶ

ಬಿಜಾಪುರದಿಂದ ಬಂದಿರುವ ವಾರ್ತೆ ಪ್ರಕಾರ, ಲಹಗಾನಿನಲ್ಲಿ ನೀರಾವರಿ ಕೆಲಸದ ಆಸ್ತಿಭಾರ ಶಿಲೆಯನ್ನು ನೀರಾವರಿ ಮಂತ್ರಿ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಸ್ಥಾಪಿಸುತ್ತಾ, ಪ್ರಾಮಾಣಿಕನು ದೇವರನ್ನು ಸಹ ಎದುರಿಸಬಲ್ಲನು ಎಂದು ನುಡಿದರು.

★

ಪಾಕೀಸ್ತಾನದ ನಿರಾಕರಣೆ

ಸ್ವಾತಂತ್ರ್ಯೋತ್ಸವದ ದಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಯುದ್ಧ ನಿರೋಧ ಒಪ್ಪಂದಕ್ಕೆ ಕಸಿ ನೀಡಿದುದನ್ನು ಪಾಕೀಸ್ತಾನ ತಿರಸ್ಕರಿಸಿದೆ. ಒಪ್ಪಂದಕ್ಕೆ ಮುಂಚೆ ಕಾಶ್ಮೀರ ಪ್ರಪ್ರಥಮವಾಗಿ ವ್ಯವಸ್ಥೆ ಆಗಬೇಕೆಂದು ಪಾಕೀಸ್ತಾನದ ಕೇಳಿಕೆ ಆಗಿದೆ.

ಜೆಳಗಾಂ — ರೂ. 1 ಲಕ್ಷದ ಗಾಂಧಿ ಸ್ಮಾರಕ ನಿರ್ಮಿಸುವುದಾಗಿ ಧ್ವಜಾರೋಹಣ ಮಾಡಿದ ಶ್ರೀ ಶ್ರೀನಿವಾಸಪ್ಪ ತಿಳಿಸಿದರು.

ಪೂಳೇನರಸೀಪುರ — ಧ್ವಜಾರೋಹಣ ಆದನಂತರ ಭಾರಿ ಮೆರವಣಿಗೆ ನಡೆಯಿತು.

— — ವ್ಯವಸಾಯ ಚಿತ್ರ — —

Quality Printing — Neat Binding

Lakshminarasimha Press

Sivarampet, Mysore

ಅಶೋಕ ಪಿಜಿನ್'ಸೀನ್'

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳನ್ನು ಸ್ಟಾಕ್ ಇರಿಸಲಾಗಿದೆ

SHAKTI SUDHA

A Superb Tonic

ಪುಡ್‌ಲಾಂಡ್ಸ್ 9-8-68 ರಿಂದ

ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ —

ಫಜ್ರ್

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ, ಮುಕ್ರಿ, ಆಗಾ ಮುಂತಾದವರು

ಸಂಗೀತ —

ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೇರ— ಜನಪ್ರಿಯ 7 ನೇ ವಾರ

ಚಿತ್ತಾಕರ್ಷ ಕನ್ನಡ ಚಿತ್ರ

ನಮ್ಮ ಊರು

ಪಾತ್ರ : ಉದಯ ಕುಮಾರ್ ಅಶ್ವತ್ಥ್ ಬಾಲಕೃಷ್ಣ ಕೃಷ್ಣಕುಮಾರಿ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀದಕ್ಷಿಣಾಮ್ನಾಯ ಜಗದ್ಗುರು ಮಹಾಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾತ್ತ ಅನುಗ್ರಹ ಕೃಪೆಯಿಂದ

ಕನ್ನಡನಾಡಿನಲ್ಲಿ ಗೋರಕ್ಷಣೆ ಪತ್ರಿಕೆಯ, ತಿಂಗಳಿಗೊಂದು, ಪಶುವೈದ್ಯ, ವಿಚಾರಧಾರೆ ವಿಷಯಕ ಪ್ರಚಾರ ಮಾಸಪತ್ರಿಕೆ : ವಾರ್ಷಿಕ ಚಂದಾ 50 ಪೈಸೆ

— ಗೋರಕ್ಷಣೆ ವ್ಯವಸ್ಥಾಪಕರು ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹಕ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇವಂಟಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ.ಎಸ್ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಬಿ. ಶಾಮಿಭಟ್ಟಗಳು, 1030 ವಿದ್ಯಾರಣ್ಯಪುರ, ಮೈಸೂರು

ಶ್ರೀ ಅನಂತನಂಜಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ ಹೊಂಗನೂರು

ಗೋರಕ್ಷಣ ಆಫೀಸು ಸತ್ಯವಾದಿಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Cow Slaughter should be banned Immediately

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore-4